<u>ಒಂದನೇ ಅಪರ   ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ,</u>

<u>ಕೊಳ್ಳೇಗಾಲ</u>

<u>ಸಿ ಸಿ  ಸಂಖ್ಯೆ  470/2018</u>

ಚಾಸಾ 8 ಫ್ರಾಸಾ 5

| | | |
|---|---|---|
| ಸಾಕ್ಷಿಯ ಹೆಸರು | : | ಶಿವಕುಮಾರ್ |
| ತಂದೆಯ  ಹೆಸರು | : | ಆಧ್ಯಾನಾಯಕ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ದೊಮ್ಮನಗದ್ದೆ ಗ್ರಾಮ, ಹನೂರು ತಾಲ್ಲೂಕು. |

<u>ದಿನಾಂಕ 02.06.2026 ರಂದು ಸಾಕ್ಷಿದಾರರನ್ನು  ಕರೆಸಿ  ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ   ವಿಚಾರಣೆಃ –   ಮಾನ್ಯ ಸಸಅ ರವರಿಂದ</u>

ಚಾಸಾ–1 ರಿಂದ 7 ಮತ್ತು 9 ರವರ ಪರಿಚಯ ಇರುವುದಿಲ್ಲ.  ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲೆ ಸ್ಥಳ ಮಹಜರ್ ಆಗಿದ್ದು, ಅದನ್ನು ನಿಪಿ–1 ಎಂದು ಈಗಾಗಲೇ ಗುರುತಿಸಲಾಗಿದ್ದು, ನಿಪಿ–1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–1(ಇ) ಎಂದು ಗುರುತಿಸಲಾಯಿತು.

ನಿಪಿ–1 ಕ್ಕೆ ಸುಮಾರು 8 ವರ್ಷಗಳ ಹಿಂದೆ  ರಾಮಾಪುರ ಪೊಲೀಸ್ ಠಾಣೆಯ ಬಳಿ ಸಹಿ ಮಾಡಿರುತ್ತೇನೆ. ನಿಪಿ–1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.  ಪ್ರಕರಣ ಸಂಬಂಧ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಈ ಪ್ರಕರಣದ ವಿದ್ಯಾಮಾನ ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಈ ಸಾಕ್ಷಿಯನ್ನು   ಪ್ರತಿಕೂಲ  ಸಾಕ್ಷಿಯಾದ ಕಾರಣ ಸಹಾಯಕ ಸರ್ಕಾರಿ ಅಭಿಯೋಜಕರು   ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಗಿದೆ)**

**ಪಾಟೀ ಸವಾಲು : ಮಾನ್ಯ ಸ.ಸ.ಅ ರವರಿಂದ**

ದಿನಾಂಕ 22.03.2018 ರಂದು ನಾನು ರಾಮಾಪುರಕ್ಕೆ ನನ್ನ ವೈಯಕ್ತಿಕ ಕೆಲಸದ ನಿಮಿತ್ತ ಬಸ್ ನಿಲ್ದಾಣದ ಬಳಿ ಇರುವಾಗ ಚಾಸಾ-5 ರವರು ನನ್ನನ್ನು ಮತ್ತು ಚಾಸಾ-9 ರವರನ್ನು ಬರಮಾಡಿಕೊಂಡು ಚಾಸಾ-1 ರವರಿಗೆ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಭಾತ್ಮೀ ಬಂದಿದ್ದು ನೀವು ಪಂಚರಾಗಿ ಬರಲು ಕೋರಿಕೊಂಡರು ಎಂದರೆ ಸರಿಯಲ್ಲ. ಆಗ ನಮ್ಮನ್ನು ಚಾಸಾ-1 ರವರ ಮುಂದೆ ಹಾಜರುಪಡಿಸಿದ್ದು, ಚಾಸಾ-1 ರವರು ಈ ದಿನ ಬೆಳಿಗ್ಗೆ 10.15 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿರುವಾಗ ಭಾತ್ಮೀದಾರರಿಂದ ಠಾಣಾ ಸರಹದ್ದು ಅಜ್ಜಿಪುರ ಪಂಚಾಯಿತಿಯ ಜಿ.ಆರ್. ನಗರದ ವೇಲುಸಾಮಿರವರು ವಾಸದ ಮನೆಯ ಮುಂಭಾಗ ಸಾರ್ವಜನಿಕ ರಸ್ತೆಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿರುತ್ತದೆ ದಾಳಿಯ ಸಮಯದಲ್ಲಿ ನಮ್ಮನ್ನು ಪಂಚರಾಗಿ ಸಹಕರಿಸುವಂತೆ ಕೋರಿಕೊಂಡರು ಎಂದರೆ ಸರಿಯಲ್ಲ. ಅದಕ್ಕೆ ನಾವು ಒಪ್ಪಿದ ಮೇರೆಗೆ ನನ್ನನ್ನು ಮತ್ತು ಚಾಸಾ-1 ರಿಂದ 7 ಮತ್ತು 9 ರವರನ್ನು ಇಲಾಖಾ ಜೀಪ್ ನಂಬರ್ ಕೆಎ-10-ಜಿ-267 ನಲ್ಲಿ ಕೂರಿಸಿಕೊಂಡು ಬೆಳಿಗ್ಗೆ 10.30 ಗಂಟೆಯಲ್ಲಿ ಠಾಣೆಯನ್ನು ಬಿಟ್ಟು 11.00 ಗಂಟೆ ಸಮಯದಲ್ಲಿ ಜಿ.ಆರ್. ನಗರ ಗ್ರಾಮಕ್ಕೆ ಹೋಗಿ ಜೀಪನ್ನು ಮರೆಯಾಗಿ ನಿಲ್ಲಿಸಿದೆವು ಎಂದರೆ ಸರಿಯಲ್ಲ. ಆಗ ವೇಲುಸಾವಮಿರವರ ತಮ್ಮ ಮನೆಯ ಮುಂಬಾಗದ ರಸ್ತೆಯಲ್ಲಿ ಅಕ್ರಮವಾಗಿ ಮದ್ಯದ ಪೌಚುಗಳನ್ನು ಒಂದು ರಟ್ಟಿನ ಬಾಕ್ಸ್ ನಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಆಗ ಸದರಿ ಅಸಾಮಿಯು ನಮ್ಮನ್ನು ಕಂಡು ಪರಾಗಿಯಾಗಲು ಯತ್ನಿಸಿದನು ಎಂದರೆ ಸರಿಯಲ್ಲ. ಆಗ ನಾವುಗಳು ಆತನನ್ನು ಹಿಡಿದು ಆತನ ಹೆಸರು ವಿಳಾಸ ಕೇಳಲಾಗಿ ಆತನು ತನ್ನ ಹೆಸರು ವೇಲುಸ್ವಾಮಿ ಬಿನ್ ಷಣ್ಮುಗ, ಜಿ.ಆರ್. ನಗರ ಗ್ರಾಮ ಎಂದು ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ನಂತರ ಆತನ ಬಳಿ ಇದ್ದ ರಟ್ಟಿನ ಬಾಕ್ಸ್ ನ್ನು ನಮ್ಮ ಸಮಕ್ಷಮ ಬಿಚ್ಚಿಸಿ ನೋಡಿದಾಗ ಸದರಿ ಬಾಕ್ಸ್ ನಲ್ಲಿ 90 ಎಂ.ಎಲ್. ನ ಹೈವಾರ್ಡ್ಸ್ ಚಿಯರ್ಸ್ ವಿಸ್ಕಿಯ 60 ಟೆಟ್ರಾ ಪೌಚುಗಳು

ಇದ್ದವು ಎಂದರೆ ಸರಿಯಲ್ಲ. ನಂತರ ಆತನನ್ನು ಮದ್ಯ ಮಾರಾಟ ಮಾಡಲು ಪರವಾನಿಗೆ ಇದೆಯೇ ಎಂದು ಕೇಳಲಾಗಿ ಆತನು ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿರುತ್ತಾನೆ. ನಂತರ ಸದರಿ ಮದ್ಯದ ಪೌಚುಗಳ ಪೈಕಿ 30 ಪೌಚುಗಳನ್ನು ತಜ್ಞರಿಗೆ ಕಳುಹಿಸುವ ಸಲುವಾಗಿ ಪ್ರತ್ಯೇಕಪಡಿಸಿ ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಹೊಲಿದು ಆರ್. ಎಂಬ ಅಕ್ಷರದಿಂದ ಸೀಲು ಮಾಡಿ ಬೆಳಿಗ್ಗೆ 11.15 ಗಂಟೆಯಿಂದ 12.15 ಗಂಟೆಯವರೆಗೆ ನಿಪಿ–1 ರಂತೆ ಮಹಜರ್ ಕ್ರಮ ಜರುಗಿಸಿ ಸ್ಥಳದಲ್ಲಿ ನನ್ನ ಮತ್ತು ಚಾಸಾ–9 ರವರ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 22.03.2018 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ನನ್ನ ಹೇಳಿಕೆಯಲ್ಲಿ "ದಿನಾಂಕ 22.03.2018 ರಂದು

---------------------------------------------------------

---------------------------------------------------------ನನ್ನ

ಹೇಳಿಕೆ ನೀಡಿರುತ್ತೇನೆ." ಸಾಕ್ಷಿಯು ಅಲ್ಲಗಳೆದಿರುವ ಹೇಳಿಕೆಯ ಭಾಗವನ್ನು ನಿಪಿ–8 ಎಂದು ಗುರುತಿಸಲಾಯಿತು. ನಿಪಿ–1 ಮತ್ತು 8 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರು ನಾನು ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಇರುವುದಿಲ್ಲ.**

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಕೊಳ್ಳೇಗಾಲ.